ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (234) 93
ಸದಸ್ಯರ ಹೆಸರು : ಶ್ರೀ ಈಶ್ವರ ಭೀಮಣ್ಣ ಖಂಡ್ರೆ
(ಶ್ರೀ ಲಕ್ಷ್ಮಣಾ ಸ. ಸವದಿ)

ಕ್ರ ಸಂ	ಪ್ರಶ್ನೆ		ಉತ್ತರ
ಅ.	ಅಪೆಕ್ಸ್ ಬ್ಯಾಂಕಿನಿಂದ ಇತ್ತೀಚೆಗೆ ರಿಲೆಯಬಲ್ ಡೆವಲಪರ್ಸ್ ಎಂಬ ಖಾಸಗಿ ಸಂಸ್ಥೆಗೆ 25 ಕೋಟಿ ರೂಪಾಯಿಗಳ ಯೋಜನಾ ಸಾಲವನ್ನು (ಪ್ರಾಜೆಕ್ಟ್ ಲೋನ್) ನೀಡಿರುವುದು ನಿಜವೇ?		ನೀಡಲಾಗಿದೆ.
ಆ.	ಹಾಗಿದ್ದಲ್ಲಿ. ಸಾಲವನ್ನು ನೀಡುವಾಗ ಅನುಸರಿಸಲಾದ ನೀತಿ ನಿಯಮಗಳೇನು. ಈ ಸಂಬಂಧವಾಗಿ ನಬಾರ್ಡಿನ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಪಾಲಿಸಲಾಗಿದೆಯೇ?		ಬ್ಯಾಂಕು ಸಾಲ ನೀಡುವಾಗ ನಬಾರ್ಡಿನ ಈ ಕೆಳಕಂಡ ನಿಯಮಗಳನ್ನು ಅನುಸರಿಸಬೇಕಿರುತ್ತದೆ. ಬ್ಯಾಂಕಿನಿಂದ ಸಹಕಾರೇತರ ಘಟಕಗಳಿಗೆ ನೀಡುವ ಸಾಲಗಳು ಬ್ಯಾಂಕಿನ ಬಂಡವಾಳ ನಿಧಿಯ ಶೇಕಡ 25 ಮೀರಕೂಡದು. ವ್ಯಕ್ತಿಗತ ಸಾಲಗಳನ್ನು ಸಹಕಾರೇತರ ಘಟಕಗಳಿಗೆ ಮಂಜೂರು ಮಾಡುವ ಸಂದರ್ಭದಲ್ಲಿ ಕಳೆದ ಸಾಲಿನಲ್ಲಿ ಗಳಿಸಿದ ಗರಿಷ್ಟ ಅಂತರಿಕ ಸಂಪನ್ಮೂಲದ (Maximum internal lendable resources) ಶೇಕಡ 25 ಕ್ಕಿಂತ ಹೆಚ್ಚಾಗಕೂಡದು. ಬ್ಯಾಂಕಿನಿಂದ ನೀಡುವ ವ್ಯಕ್ತಿಗತ ಗರಿಷ್ಟ ಸಾಲವು ರೂ.35.00 ಲಕ್ಷಗಳನ್ನು ಮೀರಬಾರದು. ನಬಾರ್ಡಿನ ಎರಡು ನಿಯಮಗಳನ್ನು ಪಾಲಿಸದೆ ಬ್ಯಾಂಕು ಸಾಲ ಮಂಜೂರು ಮಾಡಿದೆ. ಇದಕ್ಕೆ ಸಂಬಂದಿಸಿದಂತೆ ರಾಜ್ಯ ಸರ್ಕಾರದಿಂದ ಅನುಮೋದನೆಗೊಂಡ ಯಾವುದೇ ಸಾಲ ನಿಯಮಗಳಿರುವುದಿಲ್ಲ.
ಇ.	ನಬಾರ್ಡ ಹಾಗೂ ರಾಜ್ಯ ಸರ್ಕಾರದ ನಿಯಮಗಳ ಅನುಸಾರ ಸಹಕಾರಿಯೇತರ ಸಂಸ್ಥೆಗಳಿಗೆ ಸಾಲ ನೀಡುವಾಗ ಯಾವ ನಿಯಮಗಳನ್ನು ಅನುಸರಿಸಬೇಕಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು)		ನಬಾರ್ಡಿನ ನಿಯಮಗಳ ಪ್ರಕಾರ ವ್ಯಕ್ತಿಗತ ಕೃಷಿಯೇತರ ಸಾಲದ ಮೊತ್ತವು ರೂ.35.00 ಲಕ್ಷಗಳಿಗೆ ಮೀರಬಾರದು ಮತ್ತು ಇಂತಹ ಸಾಲಗಳನ್ನು ನೀಡುವಾಗ ಬ್ಯಾಂಕು ಕಳೆದ ಸಾಲಿನಲ್ಲಿ ಗಳಿಸಿದ ಗರಿಷ್ಟ ಆಂತರಿಕ ಸಂಪನ್ಮೂಲದ (Maximum internal lendable resources) ಶೇಕಡ 25 ಕ್ಕಿಂತ

			ಹೆಚ್ಚಾಗಕೂಡದು.
ಈ.	ಅಪೆಕ್ಸ್ ಬ್ಯಾಂಕು ಮೇಲ್ಕಂಡ ಪ್ರಕರಣದಲ್ಲಿ ನಬಾರ್ಡಿನ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಪಾಲನೆ ಮಾಡಿದೆಯೇ?		ಈ ಪ್ರಕರಣದಲ್ಲಿ ನಬಾರ್ಡಿನ 2 ನಿಯಮಗಳನ್ನು ಪಾಲನೆ ಮಾಡಿರುವುದಿಲ್ಲ. ಹಾಗೂ ಈ ಬಗ್ಗೆ ರಾಜ್ಯ ಸರ್ಕಾರದಿಂದ ಹೊರಡಿಸಲಾದ ಯಾವುದೇ ಪ್ರತ್ಯೇಕ ನಿಯಮಗಳು ಇರುವುದಿಲ್ಲ.
ಉ.	ಹಾಗಿಲ್ಲದಿದ್ದಲ್ಲಿ. ಕಾರಣಗಳೇನು?		ಬ್ಯಾಂಕು ತನ್ನ ಸಂಪನ್ಮೂಲಗಳನ್ನು ಕೃಷಿ ಸಾಲ. ಕೃಷಿಯೇತರ ಸಾಲ ಹಾಗೂ ಹೂಡಿಕೆಗಳನ್ನು ತೊಡಗಿಸಿ ಆದಾಯ ಗಳಿಸಬೇಕಾಗಿರುತ್ತದೆ. ಆದರೆ ಕೃಷಿ ಸಾಲ ಹಾಗೂ ಹೂಡಿಕೆಗಳಲ್ಲಿ ಬರುವ ಆದಾಯಕ್ಕಿಂತ ಕೃಷಿಯೇತರ ಸಾಲ ನೀಡಿಕೆಯಲ್ಲಿ ಹೆಚ್ಚಿನ ಆದಾಯ ಬರುವುದರಿಂದ ಬ್ಯಾಂಕಿನ ಲಾಭ ಗಳಿಕೆ ದೃಷ್ಟಿಯಿಂದ ಈ ಪ್ರಸ್ತಾವನೆಯನ್ನು ಅಡಳಿತ ಮಂಡಳಿಯು ಪರಿಶೀಲಿಸಿ ಸಾಲ ಮಂಜೂರು ಮಾಡಿರುತ್ತದೆ. ಅಪೆಕ್ಸ್ ಬ್ಯಾಂಕಿನಲ್ಲಿ ದಿನಾಂಕ : 31.01.2008 ಕ್ಕೆ ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲ ರೂ.400.00 ಕೋಟಿಗಳು ಲಭ್ಯವಿದ್ದು ಈ ಮೊತ್ತವನ್ನು ಲಾಭದಾಯಕವಾಗಿ ಬಳಸಿಕೊಳ್ಳಲು ಬ್ಯಾಂಕಿನ ದಿನಾಂಕ : 25.03.2008 ರ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಲಾಯಿತು. ಈ ಪ್ರಕರಣದಲ್ಲಿ ನೀಡಿದ ಸಾಲದ ಮೊತ್ತ ರೂ.25.00 ಕೋಟಿಗಳನ್ನು ಕೃಷಿ ಸಾಲವಾಗಿ ಶೇ.6ರ ಬಡ್ಡಿ ದರದಲ್ಲಿ ನೀಡಿದ್ದಲ್ಲಿ ಈ ಸಾಲಕ್ಕೆ ವಾರ್ಷಿಕ ರೂ.1.50 ಕೋಟಿಗಳ ಆದಾಯ ಬರುತ್ತಿತ್ತು. ಸದ್ಯದಲ್ಲಿ ಕೃಷಿಯೇತರ ಸಾಲಗಲನ್ನು ಶೇಕಡ 12ರ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ಪ್ರಶ್ನೆಯಲ್ಲಿರುವ ಹಣದ ಮೊತ್ತವನ್ನು ಕೃಷಿಯೇತರ (ಯೋಜನಾ) ಸಾಲದಲ್ಲಿ ಶೇಕಡ 15ರ ಬಡ್ಡಿ ದರದಲ್ಲಿ ನೀಡಿರುವುದರಿಂದ ವಾರ್ಷಿಕ ರೂ.3.75 ಕೋಟಿಗಳ ಆದಾಯ ಬ್ಯಾಂಕಿಗೆ ಬರುತ್ತದೆ. ಈ ಕ್ರಮದಿಂದಾಗಿ ರೂ.2.25 ಕೋಟಿಗಳ ಹೆಚ್ಚುವರಿ ಆದಾಯವನ್ನು ಬ್ಯಾಂಕು ಗಳಿಸುತ್ತದೆ. ಈ ಸಾಲಕ್ಕೆ ಪೂರ್ಣವಾಗಿ ಭದ್ರತೆ ಆಗಿರುತ್ತದೆ. ರೂ.25.00 ಕೋಟಿಗಳ ಸಾಲ ನೀಡುವಾಗ ರೂ.45.00 ಕೋಟಿಗಳ ಸ್ಥಿರಾಸ್ತಿಯನ್ನು ಭದ್ರತೆಯಾಗಿ ಬ್ಯಾಂಕಿಗೆ ಅಡಮಾನ ಮಾಡಿಕೊಳ್ಳಲಾಗಿದೆ. ಇನ್ನೂ ಹೆಚ್ಚಿನ ಸುರಕ್ಷತೆಗಾಗಿ ಅಡಮ್ಮಾನ

			ಮಾಡಿಕೊಂಡಿರುವ ಸ್ಥಿರಾಸ್ತಿಯಿಂದ ಬರುವ ಮಾಸಿಕ ಬಾಡಿಗೆ ಮೊತ್ತ ರೂ.45.37 ಲಕ್ಷಗಳು ನೇರವಾಗಿ ಸಾಲದ ಖಾತೆಗೆ ಜಮಾ ಬರುವಂತೆ ಅಗತ್ಯ ಕರಾರು ಪತ್ರ ಮಾಡಿಕೊಳ್ಳಲಾಗಿದೆ. ಮೇಲಿನ ಕಾರಣಗಳಿಗಾಗಿ ಸಾಲ ಮಂಜೂರು ಮಾಡಲಾಗಿದೆ ಎಂದು ಅಪೆಕ್ಸ್ ಬ್ಯಾಂಕು ತಿಳಿಸಿರುತ್ತದೆ.
ಊ.	ಸಾಲ ನೀಡಿಕೆಯ ಬಗ್ಗೆ ನಬಾರ್ಡು ಮತ್ತು ಸಹಕಾರ ಸಂಘಗಳ ನಿಬಂಧಕರು ತಮ್ಮ ಅಸಮ್ಮತಿಯನ್ನು ಸೂಚಿಸಿ ಪತ್ರ ಬರೆದಿರುವುದು ನಿಜವೇ (ಪತ್ರಗಳ ಪ್ರತಿ ಒದಗಿಸುವುದು)		ಸಾಲ ನೀಡಿಕೆ ಬಗ್ಗೆ ನಬಾರ್ಡ್ ಮತು ಸಹಕಾರ ಸಂಘಗಳ ನಿಬಂಧಕರು ತಮ್ಮ ಅಸಮ್ಮತಿ ಸೂಚಿಸಿ ಬ್ಯಾಂಕಿಗೆ ಪತ್ರ ಬರೆದಿರುತ್ತಾರೆ.
ಋ.	ನಬಾರ್ಡಿನ ಹಾಗೂ ಸಹಕಾರ ಸಂಘಗಳ ನಿಬಂಧಕರು ವಿರೋಧದ ನಡುವೆಯೂ ಮೇಲ್ಕಂಡ ಸಹಕಾರಿಯೇತರ ಸಂಸ್ಥೆಗೆ ಸಾಲ ನೀಡಿರುವ ಔಚಿತ್ಯವೇನು?		ಸದರಿ ಸಾಲಕ್ಕೆ ನೀಡಿರುವ ಭದ್ರತೆ. ಸಾಲ ಮರುಪಾವತಿಯ ಶಕ್ಯತೆ. ಜಾಮೀನುದಾರರ ನೆಟ್‌ವರ್ತ್. ಸದರಿಯವರು ಕೈಗೊಂಡಿರುವ ಯೋಜನಾ ಪ್ರಗತಿ ಇವುಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಬ್ಯಾಂಕಿನಲ್ಲಿ ಹೆಚ್ಚವರಿ ಸಂಪನ್ಮೂಲಗಳನ್ನು ಈ ರೀತಿಯ ಯೋಜನೆಗಳಲ್ಲಿ ತೊಡಗಿಸಿದರೆ ತನ್ನ ಸ್ವಸಾಮರ್ಥ್ಯತೆಯನ್ನು ವೃದ್ಧಿಸಿಕೊಳ್ಳಲು ಅನುಕೂಲವಾಗುತ್ತದೆ ಎಂಬ ಸದುದ್ದೇಶದಿಂದ ಬ್ಯಾಂಕಿನ ಆಡಳಿತ ಮಂಡಳಿಯಿಂದ ಅನುಮೋದಿತವಾದ ಸಾಲ ನೀಡಿಕೆಯ ನಿಯಮಗಳ ಅನ್ವಯ ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿಯು ಈ ಸಾಲವನ್ನು ಮಂಜೂರು ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.
ಎ.	ನಿಯಮಗಳನ್ನು ಉಲ್ಲಂಘನೆ ಮಾಡಿದವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?		ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ನಬಾರ್ಡಿನ ಮುಖ್ಯ ಪ್ರಧಾನ ವ್ಯವಸ್ಥಾಪಕರು ಸದಸ್ಯರಾಗಿದ್ದು ಬ್ಯಾಂಕು ಪ್ರಾಜೆಕ್ಟ್ ಸಾಲ ನೀಡಿಕೆಗೆ ಮಾನದಂಡಗಳನ್ನು ಅಳವಡಿಸಿಕೊಂಡಾಗ ಅವರು ಆಡಳಿತ ಮಂಡಳಿಯ ಸಭೆಯಲ್ಲಿ ಹಾಜರಿದ್ದರು. ಬ್ಯಾಂಕು ಕೃಷಿಯೇತರ ಆದಾಯವನ್ನು ಹೆಚ್ಚಿಸುವ ಸಲುವಾಗಿ ಈ ಸಾಲವನ್ನು ನೀಡಿದ್ದು ಇನ್ನು ಮುಂದೆ ಆದಷ್ಟು ನಬಾರ್ಡಿನ ನಿಯಮಗಳನ್ನು ಪಾಲಿಸುವಂತೆ ಸರ್ಕಾರವು ಬ್ಯಾಂಕಿಗೆ ಸೂಚಿಸಿರುತ್ತದೆ.